ಪ್ರಜಾವಾಣಿ

# ಜೈನ್ ವಿಶ್ವವಿದ್ಯಾಲಯಕ್ಕೆ ಪ್ರಶಸ್ತಿ



ಬೆಂಗಳೂರಿನ ಸೇಂಟ್ ಜಾನ್ ವೈದ್ಯಕೀಯ ಕಾಲೇಜಿನ ಆಶ್ರಯದಲ್ಲಿ ನಡೆದ ಅಂತರ ಕಾಲೇಜು ಕ್ರೀಡಾ ಉತ್ಸವದ ಬ್ಯಾಸ್ಕೆಟ್‌ಬಾಲ್ ಸ್ಪರ್ಧೆಯಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡ ಜೈನ್ ವಿಶ್ವವಿದ್ಯಾಲಯ ತಂಡದ ಆಟಗಾರರು . (ನಿಂತವರು, ಎಡದಿಂದ) ಯಶ್ ಶೆಟ್ಟಿ, ಸಿ.ನಿಖಿಲ್, ಎಡ್ವಿನ್, ಪ್ರೀತಂ ರೆಡ್ಡಿ, ಸಕ್ಸೆನ್, ವೈಶಾಖ್ ಮತ್ತು ನಿತಿನ್.(ಕುಳಿತವರು) ದೇವಿ ಪ್ರಸಾದ್ (ನಾಯಕ), ಯು.ವಿ. ಶಂಕರ್ (ಕ್ರೀಡಾ ನಿರ್ದೇಶಕ), ನಟರಾಜ್ (ಪ್ರಿನ್ಸಿಪಾಲ್), ಪುನೀತ್ ಸುರೇಶ್ (ಕೋಚ್), ವಿನೋದ್ (ಸಹಾಯಕ ಕೋಚ್). (ಮಂಡಿಯೂರಿ ಕುಳಿತವರು) ಮನೋಜ್ ಮತ್ತು ಧರಣಿ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರಣಿ ಮತ್ತು ಸಿ.ನಿಖಿಲ್ ಅವರ ಮಿಂಚಿನ ಆಟದ ಬಲದಿಂದ ಜೈನ್ ವಿಶ್ವವಿದ್ಯಾಲಯ ತಂಡ ಸೇಂಟ್ ಜಾನ್ ವೈದ್ಯಕೀಯ ಕಾಲೇಜಿನ ಆಶ್ರಯದಲ್ಲಿ ನಡೆದ ಅಂತರ ಕಾಲೇಜು ಕ್ರೀಡಾ ಉತ್ಸವದ ಬ್ಯಾಸ್ಕೆಟ್‌ಬಾಲ್ ಸ್ಪರ್ಧೆಯಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿದೆ.

ಬಾಲಕರ ವಿಭಾಗದ ಪ್ರಶಸ್ತಿ ಸುತ್ತಿನ ಪೈಪೋಟಿಯಲ್ಲಿ ಜೈನ್ ವಿಶ್ವವಿದ್ಯಾಲಯ 68-47 ಪಾಯಿಂಟ್‌ನಿಂದ ಕ್ರೈಸ್ಟ್ ವಿಶ್ವವಿದ್ಯಾಲಯ ತಂಡವನ್ನು ಮಣಿಸಿತು.

ವಿಜಯಿ ತಂಡದ ಧರಣಿ 33 ಪಾಯಿಂಟ್ಸ್ ಗಳಿಸಿದರೆ, ಸಿ. ನಿಖಿಲ್ 14 ಪಾಯಿಂಟ್ಸ್ ಕಲೆಹಾಕಿ ಎದುರಾಳಿ ತಂಡಕ್ಕೆ ಸಿಂಹಸ್ವಪ್ನರಾದರು.

ಕ್ರೈಸ್ಟ್ ತಂಡದ ರಾಬಿನ್ (15) ಮತ್ತು ನಿಖಿಲ್ (14) ಸೋಲಿನ ನಡುವೆಯೂ ಗಮನಸೆಳೆದರು.